# ಪುರುಷ ಅಭಿಮಾನಿಗಳು ಹೆಚ್ಚಿದ್ದಾರೆ!

**ನಿತ್ಯಾ ರಾಮ್**
ಉದಯದ
'ನಂದಿನಿ'ಯ ಗಂಗಾ

★ *ತೆರೆ ಮೇಲೆ ಮಿಂಚುತ್ತಿದ್ದೀರಿ. ಅದರ ಹಿಂದೆ ಎಷ್ಟು ಕಷ್ಟಪಟ್ಟಿದ್ದೀರಿ?*

ನಾನು ತೆಲುಗಿನಲ್ಲಿ ನಟಿಸುತ್ತಿದ್ದೆ. ಅಲ್ಲಿ ಎರಡನೇ ಧಾರಾವಾಹಿಯನ್ನು ಅರ್ಧಕ್ಕೆ ಬಿಟ್ಟೆ. 'ನಂದಿನಿ'ಯಲ್ಲಿ ತೀರಾ ಆಕಸ್ಮಿಕವಾಗಿ ಅವಕಾಶ ಸಿಕ್ಕಿತು. ಸರ್ಪ ಕಥೆ ಇಷ್ಟ ಆಗಲ್ಲ. ಮಾಟ ಮಂತ್ರದ ಕಥೆಗಳು ಎಲ್ಲೆಡೆ ತುಂಬಿವೆ. ಸಹಜ ಕಥೆ ಇದ್ದರೆ ಮಾಡುತ್ತೇನೆ ಎಂದರೂ ಪಾತ್ರ ನನ್ನನ್ನೇ ಹುಡುಕಿ ಬಂತು. ಪಾತ್ರವಾಗಿ ಕಥೆ ಒಳಗೆ ಹೊಕ್ಕಾಗ ಅದ್ಭುತ ಎಂದು ಗೊತ್ತಾಯಿತು. ಈ ಪಾತ್ರ ನಿರ್ವಹಣೆಗಾಗಿ ಸಿಕ್ಕಾಪಟ್ಟೆ ತಾಲೀಮು ಮಾಡಿದ್ದೇನೆ. ಬೆವರು ಹರಿಸಿ ದೇಹವನ್ನು ಹದಗೊಳಿಸಿದ್ದೇನೆ. ಹಗಲು ರಾತ್ರಿಗಳ ಪರಿವೆ ಇಲ್ಲದೆ ತಂಡದೊಂದಿಗೆ ಕೆಲಸ ಮಾಡುತ್ತಿರುವ ಶ್ರಮಕ್ಕೆ ಜನ ಮನ್ನಣೆ ನೀಡಿದ್ದಾರೆ ಎನ್ನುವುದು ಸಮಾಧಾನವನ್ನು ತಂದಿದೆ. ಎಷ್ಟೋ ತಾಯಂದಿರು ತಮ್ಮ ಮಕ್ಕಳಿಗೆ 'ನಂದಿನಿ'ಕರೆಯುತ್ತೇನೆ ಎಂದು ಹೆದರಿಸುತ್ತಾರೆ ಎನ್ನುವುದನ್ನು ಕೇಳಿದ್ದೇನೆ. ದ್ವಿಪಾತ್ರ– ದ್ವಿಭಾಷೆಯಲ್ಲಿ ನಟಿಸುತ್ತಿರುವುದು ಸವಾಲಿನ ಸಂಗತಿ.

★ *ತಂಡದಲ್ಲಿ ಖುಷ್ಬು ಅವರ ಪಾತ್ರವೇನು?*

ನನ್ನ ಕಾಸ್ಟೂಮ್ ವಿನ್ಯಾಸ ಮಾಡುವುದೇ ಖುಷ್ಬೂ ಅವರು. ಅವರ ಪತಿ ಸುಂದರ್ ಸಿ. ನಿರ್ಮಿಸುತ್ತಿದ್ದಾರೆ. ಏಕಕಾಲದಲ್ಲಿ ಕನ್ನಡ, ತಮಿಳು, ತೆಲುಗು, ಮಲಯಾಳಂನಲ್ಲಿ ಪ್ರಸಾರವಾಗುತ್ತಿದೆ. ಚಿತ್ರೀಕರಣ ಮಾತ್ರ ಕನ್ನಡ ಮತ್ತು ತಮಿಳಿನಲ್ಲಿ ಮಾಡಲಾಗುತ್ತಿದೆ. ಅದ್ದೂರಿ ಸೆಟ್ ಚೆನ್ನೈನಲ್ಲಿ ಹಾಕಿದ್ದಾರೆ. ಧಾರಾವಾಹಿಯೂ ನಾಗಲೋಟದಿಂದ ಸಾಗುತ್ತಿದೆ. ಕಥೆ ಚಕಚಕ ಓಡುತ್ತಿದೆ. ಇದು ವೀಕ್ಷಕರಿಗೆ ಬೋರ್ ಹೊಡೆಸುವುದಿಲ್ಲ. ಒಂದು ರೀತಿಯಲ್ಲಿ ಸಿನಿಮೀಯ ರೀತಿಯಲ್ಲಿ ಧಾರಾವಾಹಿ ರೂಪಿಸಿದ್ದಾರೆ. ಕಥೆಯನ್ನು ಸಿಂಹಾವಲೋಕನ ಕ್ರಮದಿಂದ ನಂದಿನಿಯ ದ್ವೇಷಕ್ಕೆ ಕಾರಣವನ್ನು ತೋರಿಸುತ್ತಿರುವುದು ತುಂಬಾ ಖುಷಿ ಕೊಡುತ್ತಿದೆ.

★ *'ನಂದಿನಿ' 'ಗಂಗಾ' ಈ ಎರಡೂ ಪಾತ್ರಗಳ ವೈರುಧ್ಯವನ್ನು ಹೇಗೆ ನಿಭಾಯಿಸುತ್ತೀರಿ?*

ಗಂಗಾ ತುಂಬಾ ಮುಗ್ಧ ಹೆಣ್ಣು. ರಾಜ ಕುಟುಂಬಸ್ಥರ ಸೇವಕಿಯ ಮಗಳು. ಆಕೆಯೂ ಮನೆಗೆಲಸವನ್ನು ಮಾಡುತ್ತಾಳೆ. ಆಕೆಯೊಳಗೆ ನಂದಿನಿ ಪ್ರವೇಶ ಮಾಡುತ್ತಾಳೆ. ಆಗ ಗಂಗಾಳ ನಡತೆ, ಗುಣ ಬದಲಾಗುತ್ತದೆ. ತುಂಬಾ ಸೌಮ್ಯ ಸ್ವಭಾವದ ಗಂಗಾ ಆಕ್ರೋಶದ ಗುಣವನ್ನು ನಂದಿನಿಯಾಗಿ ಪಡೆಯುತ್ತಾಳೆ. ಅತ್ಯಂತ ಕ್ರೂರ ಕೃತ್ಯವನ್ನು ಎಸಗುತ್ತಾಳೆ. ಮಗುವನ್ನು ಕೊಲ್ಲುವ ದೃಶ್ಯ ವೀಕ್ಷಕರಲ್ಲಿಯೂ ನಂದಿನಿಯ ಬಗ್ಗೆ ದ್ವೇಷ ಹುಟ್ಟುವ ಹಾಗೆ ಮಾಡಿತ್ತು. ಇದರ ಬಗ್ಗೆ ಸಾವಿರಾರು ಪತ್ರಿಕ್ರಿಯೆ ಬಂದವು. ಸ್ವತಃ ನಮ್ಮ ತಂದೆ, ತಾಯಿ ಕೂಡ 'ನೀನು ಗಂಗಾ ಆಗಿಯೇ ಉಳಿ' ಎನ್ನುತ್ತಿರುತ್ತಾರೆ. ಒಟ್ಟಾರೆ ಧಾರಾವಾಹಿಯ ನಾಯಕಿಯಾಗಿ ನೆಗೆಟಿವ್ ಮತ್ತು ಸನ್ನಡತೆ ಎರಡೂ ಗುಣಗಳನ್ನು ನಿರ್ವಹಿಸುತ್ತಿರುವುದು ನನಗೆ ಹೆಮ್ಮೆಯನ್ನು ತಂದಿದೆ.



★ *ನಿಮ್ಮ ಬಗ್ಗೆ ನೀವು ಹೇಳಿಕೊಳ್ಳುವುದಾದರೆ...*

ಬೆಂಗಳೂರಿನ ಹುಡುಗಿ. ತಂದೆ ರಾಮು ಕೆ.ಎಸ್. ಶಾಸ್ತ್ರೀಯ ನೃತ್ಯವನ್ನು ಹೇಳಿಕೊಡುತ್ತಾರೆ. ಅಮ್ಮ ಶಾಂತಾ ರಾಮ್ ಶಾಲೆಯೊಂದನ್ನು ನಡೆಸುತ್ತಾರೆ. ತಂಗಿ ರಚಿತಾ ರಾಮ್. ಆಕೆ ಕೂಡ ನಟಿ. ಸದ್ಯ ಬಿಡುವಿನ ಸಮಯ ಎಂದರೆ ನಿದ್ದೆ ಮಾಡಬೇಕು ಎನ್ನಿಸುತ್ತಿದೆ. ಬೆಂಗಳೂರಿಗೆ ಬಂದರೆ ಮನೆ ಬಿಟ್ಟು ಹೊರ ಬರುವುದು ಕಡಿಮೆ. ತಿಂಗಳಲ್ಲಿ 20ರಿಂದ 25 ದಿವಸ ನಂದಿನಿಗೆ ಕೊಡಲೇಬೇಕು. ಬೆಳಿಗ್ಗೆ 8ರಿಂದ ರಾತ್ರಿ 9ರ ತನಕ ಚಿತ್ರೀಕರಣ ನಡೆಯುತ್ತದೆ. ಮುಂಚೆ ನಾನು ದಪ್ಪ ಇದ್ದೆ. ಈಗ ಇನ್ನೂ ಸುಂದರವಾಗಿದ್ದೇನೆ ಅನ್ನಿಸುತ್ತದೆ. ಅದಕ್ಕಾಗಿ ನಿತ್ಯವೂ ಸಿಕ್ಕಾಪಟ್ಟೆ ಶ್ರಮಪಡುತ್ತೇನೆ. ಡಯಟ್ ಮಾಡುತ್ತೇನೆ. ಹೆಚ್ಚು ದ್ರವ ರೂಪದ ಆಹಾರ ತೆಗೆದುಕೊಳ್ಳುತ್ತೇನೆ. ಒಂದು ಹೊತ್ತು ಮಾತ್ರ ಕೋಳಿಯ ಖಾದ್ಯವನ್ನು ಸವಿಯುತ್ತೇನೆ.

★ *ನಿಮ್ಮ ಅಭಿಮಾನಿಗಳ ಪ್ರತಿಕ್ರಿಯೆ ಹೇಗಿದೆ?*

ಸಿಕ್ಕಾಪಟ್ಟೆ ಅಭಿಮಾನಿಗಳು ಈ ಧಾರಾವಾಹಿಯಿಂದ ನನಗೆ ಸಿಕ್ಕಿದ್ದಾರೆ. ವಿದೇಶಗಳಲ್ಲಿಯೂ ಇದ್ದಾರೆ ಎನ್ನುವುದು ಖುಷಿಯ ಸಂಗತಿ. ಶ್ರೀಲಂಕಾ, ಮಲೇಷ್ಯಾದಿಂದಲೂ ಧಾರಾವಾಹಿ ನೋಡಿ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯೆ ನೀಡುತ್ತಾರೆ. ಪಾತ್ರ ಗ್ಲಾಮರ್ ಇರುವುದರಿಂದ ಹುಡುಗರು ಹೆಚ್ಚು ಇಷ್ಟಪಡುತ್ತಾರೆ. ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳೇ ಹೆಚ್ಚಿನ ಅಭಿಮಾನಿಗಳಿದ್ದಾರೆ. ಮತ್ತೊಂದು ಸಂಗತಿ ಎಂದರೆ ಹಲವಾರು ಮಂಗಳಮುಖಿಯರೂ ನನ್ನನ್ನ ಭೇಟಿಯಾಗಿ ಸಂತಸವನ್ನು ಹಂಚಿಕೊಂಡಿದ್ದಾರೆ. 'ಪೂನಂ ಥರಾ ಇದ್ದೀರಾ' ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಅಷ್ಟು ಮಾತ್ರವಲ್ಲದೆ ನಾನು ಧರಿಸಿದ ಮಾದರಿಯ ಸೀರೆಗಳನ್ನು ಒಬ್ಬೊಬ್ಬರು ಹತ್ತು– ಹದಿನೈದು ಖರೀದಿಸಿದ್ದಾಗಿ ಹೇಳಿದ್ದಾರೆ. ಇದನ್ನೆಲ್ಲಾ ಕೇಳಿದಾಗ ಮನಸ್ಸು ತುಂಬಿ ಬರುತ್ತದೆ. ನನ್ನ ಪರಿಶ್ರಮ ಸಾರ್ಥಕ ಎನ್ನಿಸುತ್ತದೆ.

■ ರಾಘವೇಂದ್ರ